# ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ

## D. DEVARAJ URS BACKWARD CLASSES DEVELOPMENT CORPORATION

(ಕರ್ನಾಟಕ ಸರ್ಕಾರದ ಉದ್ಯಮ) (A Government of Karnataka Undertaking)


ಕ್ರಮಾಂಕ / No. : ದೇಹಿನಿ/ಸ/ನಿಯೋಮೌ/ಸಿಆರ್-30/2015-16

ದಿನಾಂಕ : / Dated : 04/07/2019.

ಮುಖ್ಯ ಮೌಲ್ಯಮಾಪನ ಅಧಿಕಾರಿ,
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ,
ಕೊಠಡಿ ಸಂಖ್ಯೆ 515, 5ನೇ ಮಹಡಿ. 2ನೇ ಹಂತ.
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

List of studies
Sl No 36 68 78 91

ಮಾನ್ಯರೆ,

**ವಿಷಯ** : ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಶ್ರಮಶಕ್ತಿ/ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆಯ ಮೌಲ್ಯಮಾಪನದ ಪರಿಷ್ಕೃತ ವರದಿಯ ಕುರಿತು.

**ಉಲ್ಲೇಖ** : ತಮ್ಮ ಪತ್ರ ಸಂಖ್ಯೆ **ಕೆಇಎ 185 ಇವಿಎನ್ 2015,** ದಿನಾಂಕ **01/07/2019.**

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಶ್ರಮಶಕ್ತಿ/ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆಯ ಮೌಲ್ಯಮಾಪನದ ಪರಿಷ್ಕೃತ ವರದಿಯನ್ನು ಪರಿಶೀಲಿಸಿ ಸದರಿ ಯೋಜನೆಗೆ ಅನುಮೋದನೆ ನೀಡಲಾಗಿದೆ ಎಂದು ತಿಳಿಸಲಾಗಿರುತ್ತದೆ. ವರದಿಯಲ್ಲಿ ಮಾಡಿರುವ ಪ್ರಮುಖ ಶಿಫಾರಸ್ಸುಗಳಿಗೆ ನಿಗಮದ ವತಿಯಿಂದ ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ವಿಶ್ವಾಸಿ,
04/7/2019
ವ್ಯವಸ್ಥಾಪಕ ನಿರ್ದೇಶಕರು.

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
ಸ್ವೀಕೃತಿ ಸಂಖ್ಯೆ 010
ದಿನಾಂಕ
ಗಣಕ ಸಂಖ್ಯೆ
ದಿನಾಂಕ

357/8
5/7/19


ನಂ. 16-ಡಿ, 4ನೇ ಮಹಡಿ, ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಏರಿಯಾ, ವಸಂತನಗರ, ಬೆಂಗಳೂರು-52. # 16-D, 4th Floor, Devaraj Urs Bhavan, Millers Tank Bund Area, Vasanthanagar, Bangalore-52.
Ph. : 080 - 22374832, 22374834 Fax : 080 - 22374833, E-mail : md.dbcdc@gmail.com, Visit at : www.karnataka.gov.in/dbcdc

List of studies Sl No (36)

# ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ನಿಯಮಿತ

## ಶ್ರಮಶಕ್ತಿ/ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆ ಮೌಲ್ಯೀಕರಣ ಶಿಫಾರಸ್ಸುಗಳಿಗೆ ಕೈಗೊಂಡ ಕ್ರಮ

| ಕ್ರ. ಸಂ. | ಮೌಲ್ಯೀಕರಣ ವರದಿಯಲ್ಲಿಯ ಶಿಫಾರಸ್ಸುಗಳು | ಕರಡು ಶಿಫಾರಸ್ಸುಗಳ ಮೇಲೆ ವಹಿಸಿದ ಕ್ರಮ |
|---|---|---|
| 1 | ಸಾಂಪ್ರದಾಯಿಕ ವೃತ್ತಿಯನ್ನಾಧರಿಸಿ ಸಾಲದ ಮೊತ್ತವನ್ನು ಹೆಚ್ಚಿಸುವುದು. | ಈ ಯೋಜನೆಗೆ ಸಂಬಂಧಿಸಿದಂತೆ 2009-10ನೇ ಸಾಲಿಗಿಂತ ಮುಂಚಿನ ಫಲಾನುಭವಿಗಳನ್ನು ಮೌಲ್ಯೀಕರಣಕ್ಕೆ ಒಳಪಡಿಸಲಾಗಿರುತ್ತದೆ. ಪ್ರಸ್ತುತ ಸೌಲಭ್ಯದ ಮೊತ್ತವು ರೂ.35,000/-ಗಳಿಂದ ರೂ.2.00ಲಕ್ಷಗಳವರೆಗೆ ಹೆಚ್ಚಿಸಲಾಗಿರುತ್ತದೆ. ಆಯಾ ವೃತ್ತಿಗಳಾನ್ನಾಧರಿಸಿ ಸೌಲಭ್ಯ ಒದಗಿಸಲಾಗುತ್ತಿದೆ. |
| 2 | ಫಲಾನುಭವಿಗಳು ವೃತ್ತಿಯನ್ನು ನಿರ್ವಹಿಸಲು ನೂತನ ಉಪಕರಣಗಳನ್ನು ಒದಗಿಸುವುದು. | ಫಲಾನುಭವಿಗಳ ವೃತ್ತಿಯನ್ನು ನಿರ್ವಹಿಸಲು ಅಗತ್ಯವಿರುವ ಉಪಕರಣಗಳನ್ನು ನಿಗಮದಿಂದ ಒದಗಿಸುವ ಸೌಲಭ್ಯದ ಮೊತ್ತದಲ್ಲಿಯೇ ಪಡೆದುಕೊಳ್ಳಬಹುದಾಗಿದೆ. |
| 3 | ಸಾಂಪ್ರದಾಯಿಕ ವೃತ್ತಿದಾರರು ಉತ್ಪಾದಿಸುವ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯ ಒದಗಿಸುವುದು. | ರಾಷ್ಟ್ರಮಟ್ಟದಲ್ಲಿ ನಡೆಯುವ ವಸ್ತು ಪ್ರದರ್ಶನಗಳಿಗೆ ನಿಗಮದ ಫಲಾನುಭವಿಗಳನ್ನು ನಿಯೋಜಿಸಲಾಗುತ್ತಿದೆ. (ದಿಲ್ಲಿ ಹಾತ್, ಸೂರಜ್ ಕುಂಡ್, ಗೋವಾದ ಲೋಕೋತ್ಸವ ಮತ್ತು ದಸರ ವಸ್ತು ಪ್ರದರ್ಶನ, ಇತ್ಯಾದಿ) 2016-17ನೇ ಸಾಲಿನಿಂದ ಸಾಂಪ್ರದಾಯಿಕ ವೃತ್ತಿದಾರರಿಗೆ ಮಾರುಕಟ್ಟೆ ಸೌಲಭ್ಯ ಒದಗಿಸಲು ಹೊಸ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿದೆ. |
| 4 | ಸಾಂಪ್ರದಾಯಿಕ ವೃತ್ತಿದಾರರು ಉತ್ಪಾದಿಸುವ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ಗುರುತಿಸಲು ಕೌಶಲ್ಯಾಭಿವೃದ್ಧಿ ತರಬೇತಿ ನೀಡುವುದು. | ಸಾಂಪ್ರದಾಯಿಕ ವೃತ್ತಿದಾರರು ಉತ್ಪನ್ನಗಳನ್ನು ಹೆಚ್ಚಿಸಿಕೊಳ್ಳಲು ಮತ್ತು ಮಾರುಕಟ್ಟೆಯನ್ನು ಗುರುತಿಸಲು ನೊಂದಾಯಿತ ತರಬೇತಿ ಸಂಸ್ಥೆಗಳ ಮುಖಾಂತರ ಕಲಾತ್ಮಕ ಕುಂಬಾರಿಕೆ ತರಬೇತಿ, ಫ್ಯಾಷನ್ ಡಿಸೈನಿಂಗ್, ಕ್ಯಾಂಡಲ್ ತಯಾರಿಕೆ, ಸೌಂದರ್ಯ ವರ್ಧಕ ತರಬೇತಿ ಮುಂತಾದ ಕೌಶಲ್ಯಾಭಿವೃದ್ಧಿ ತರಬೇತಿ ನೀಡಲಾಗಿರುತ್ತದೆ.<br>ಸಾಲ ಸೌಲಭ್ಯ ಪಡೆದು ಸ್ಥಾಪಿಸಿದ ಘಟಕವನ್ನು ಯಶಸ್ವಿಯಾಗಿ ನಿರ್ವಹಿಸಲು ಇ.ಡಿ.ಪಿ. ತರಬೇತಿ ಕಾರ್ಯಕ್ರಮವನ್ನು ವಿವಿಧ ನೊಂದಾಯಿತ ಸಂಸ್ಥೆಗಳ ಮುಖಾಂತರ ನೀಡಲಾಗುತ್ತಿದೆ. |
| 5 | ಆಯಾ ವೃತ್ತಿಗೆ ಅಗತ್ಯವಿರುವ ಸಾಲದ ಮೊತ್ತದ ಪ್ರಮಾಣವನ್ನು ಹೆಚ್ಚಿಸುವುದು. | ಪ್ರಸ್ತುತ ಈ ಯೋಜನೆಯಲ್ಲಿ ಗರಿಷ್ಠ ಸಾಲದ ಮೊತ್ತ ರೂ.2.00ಲಕ್ಷಗಳವರೆಗೆ ವೃತ್ತಿ ಚಟುವಟಿಕೆಗಳನ್ನಾಧರಿಸಿ ಕನಿಷ್ಠ ಘಟಕ ವೆಚ್ಚ ನಿಗದಿಪಡಿಸಿ ಸೌಲಭ್ಯ ಒದಗಿಸಲಾಗುತ್ತಿದೆ. |

(signature)

ವ್ಯವಸ್ಥಾಪಕ ನಿರ್ದೇಶಕರು.